ಕರ್ನಾಟಕ ಸರ್ಕಾರದ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.**

**ಸಂಖ್ಯೆ: ಯೋ3/ಎಸ್.ಡಿ.ಪಿ/ಕ್ರಿಯೋ-01/19-20** **ದಿನಾಂಕ: 17.12.2019**

**ಜ್ಞಾಪನ**

**ವಿಷಯ:-** 2019-20ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯ ಕಾರ್ಯಕ್ರಮಗಳಿಗೆ ಒದಗಿಸಲಾದ ಅನುದಾನದಲ್ಲಿ 4ನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:-**
1) ಈ ಕಛೇರಿಯ ಪತ್ರ ಸಂಖ್ಯೆ: ಯೋ3/ಎಸ್.ಡಿ.ಪಿ/ಕ್ರಿಯಾಯೋಜನೆ-01/19-20 ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ: 30-05-2019
2) ಸರ್ಕಾರದ ಆದೇಶ ಸಂಖ್ಯೆ: ಇಪಿ 02 ಯೋಸಕ 2019, ದಿ:02.08.2019.
3) ಸರ್ಕಾರದ ಆದೇಶ ಸಂಖ್ಯೆ: ಇಪಿ 03 ಯೋಯೋಕ 2019, ದಿ:23.04.2019
4) ಸರ್ಕಾರದ ಆದೇಶ ಸಂಖ್ಯೆ: ಇಪಿ 03 ಯೋಯೋಕ 2019, ದಿ:24.10.2019
5) ಈ ಕಛೇರಿ ಜ್ಞಾಪನ ಪತ್ರ ದಿನಾಂಕ: 07-08-2019 ಮತ್ತು 13-11-2019

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯ "ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯ" ಲೆಕ್ಕ ಶೀರ್ಷಿಕೆ:4202-01-202-1-05-133ರಡಿ ನಿಗದಿಪಡಿಸಲಾದ ರೂ.3000-00 ಲಕ್ಷಗಳಿಗೆ 31 ಸರ್ಕಾರಿ ಪ್ರಾಥಮಿಕ ಶಾಲೆಗಳು ಹಾಗೂ 169 ಸರ್ಕಾರಿ ಪ್ರೌಢಶಾಲೆಗಳು ಸೇರಿದಂತೆ ಒಟ್ಟು 200 ಕೊಠಡಿಗಳ ನಿರ್ಮಾಣಕ್ಕೆ ಅಗತ್ಯವಿರುವ ವಿಶೇಷ ಅಭಿವೃದ್ಧಿ ಯೋಜನೆ 2008-09ರ ಅನುಷ್ಠಾನ ಕುರಿತ ಮಾರ್ಗಸೂಚಿಗಳು ಹಾಗೂ Cumulative Deprivation Index(C.D.I) ಅನ್ವಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಉಲ್ಲೇಖ-1 ರಲ್ಲಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.

2019-20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಲೆಕ್ಕ ಶೀರ್ಷಿಕೆ: 4202-01-202-1-05-133 ರಡಿ ಸಿ.ಡಿ.ಐ. ಇಂಡೆಕ್ಸ್ ಪ್ರಕಾರವೇ ವಿಶೇಷ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಯಂತೆ ಯೋಜನೆಯನ್ನು ಅನುಷ್ಠಾಗೊಳಿಸಬೇಕೆಂಬ ನಿಬಂಧನೆಯೊಂದಿಗೆ 31 ಸರ್ಕಾರಿ ಪ್ರಾಥಮಿಕ ಶಾಲೆಗಳು ಹಾಗೂ 169 ಸರ್ಕಾರಿ ಪ್ರೌಢಶಾಲೆಗಳ ಒಟ್ಟು 200 ಕೊಠಡಿಗಳ ನಿರ್ಮಾಣಕ್ಕೆ ರೂ. 3000-00 ಲಕ್ಷ ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತಾರೆ.

ಮುಂದುವರೆದು, ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಈಗಾಗಲೇ ಬಿಡುಗಡೆಯಾದ ಹಣದಲ್ಲಿ ಶೇ.75 ರಷ್ಟು ಹಣವನ್ನು ಉಪಯೋಗಿಸಿದ್ದಲ್ಲಿ 4ನೇ ತ್ರೈಮಾಸಿಕ ಕಂತಿನ ಅಯವ್ಯಯವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ರಾಜ್ಯವಲಯದಡಿ ಮುಂದುವರಿಕೆ ಕಾರ್ಯಕ್ರಮಗಳು ಅನುಷ್ಠಾನಕ್ಕೆ ವೇತನ ಮತ್ತು ಇತರೆ ಭತ್ಯೆಗಳ ಬಾಬ್ತಿನಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ 4ನೇ ತ್ರೈಮಾಸಿಕ ಅನುದಾನವನ್ನು ಉಲ್ಲೇಖ(4) ರಲ್ಲಿ ಬಿಡುಗಡೆಗೊಳಿಸಿದೆ. ಸರ್ಕಾರದ ಪ್ರತಿ ಲಗತ್ತಿಸಿದೆ. ಸರ್ಕಾರದ ಆದೇಶದನ್ವಯ ಕೆಳಕಂಡಂತೆ ಆದೇಶಿಸಿದೆ.

**ಆದೇಶ:_**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ 2019-20ನೇ ಸಾಲಿನ ಪರಿಷ್ಕೃತ ಅಯವ್ಯಯದಲ್ಲಿ ರಾಜ್ಯವಲಯದಡಿ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಿಗದಿಪಡಿಸಿರುವ ಅನುದಾನದಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಅಂತಿಮ ಕಂತಿನ ಅನುದಾನವನ್ನು ಬಿಡುಗಡೆ ಮಾಡಿ ನಿಯಮಾನುಸಾರ ಭರಿಸಲು ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಅನುಮತಿ ನೀಡಿ ಆದೇಶಿಸಿದೆ.

ಸದರಿ ವಿಶೇಷ ಅಭಿವೃದ್ಧಿ ಕ್ರಿಯಾ ಯೋಜನೆಗೆ ಅಗತ್ಯವಾದ ರೂ.3000.00 ಲಕ್ಷಗಳನ್ನು 2019-20ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ "ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯ" ಲೆಕ್ಕ ಶೀರ್ಷಿಕೆ: 4202-01-202-1-05-133 ಅಡಿಯಲ್ಲಿ ಈಗಾಗಲೇ ದಿನಾಂಕ: 07.08.2019 ರಲ್ಲಿ 1ನೇ ತ್ರೈಮಾಸಿಕದಲ್ಲಿ ಒಟ್ಟು ರೂ 747.59 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಲ್ಲೇಖ (4)ರಲ್ಲಿ 2 ಮತ್ತು 3ನೇ ತ್ರೈಮಾಸಿಕದ ಮೊತ್ತ ರೂ 1495.18 ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಉಳಿದ ಅಂತಿಮ ಕಂತಿನ ಒಟ್ಟು ರೂ 747.59 ಲಕ್ಷಗಳ ಅನುದಾನವನ್ನು ನಿಯಮಾನುಸಾರ ಭರಿಸಲು ಸಂಬಂಧಿಸಿದ (ಜಿಲ್ಲಾವಾರು ಅನುದಾನದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ) ಅನುದಾನವನ್ನು 'D' ಮೋಡ್‌ನಲ್ಲಿ ಅಪಲೋಡ್ ಮಾಡಲಾಗಿದೆ.

ಈಗಾಗಲೇ ಉಲ್ಲೇಖಿತ ಪತ್ರಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತಿಗೊಳಪಟ್ಟು ಅನುದಾನ ಬಿಡುಗಡೆ ಮಾಡಲಾಗಿದೆ.

ಒದಗಿಸಲಾದ ಅನುದಾನವು ವ್ಯಪಗತವಾಗದಂತೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರ್ಣಪ್ರಮಾಣದಲ್ಲಿ ಭರಿಸಿಕೊಳ್ಳತಕ್ಕದ್ದು. ಬಿಡುಗಡೆಯಾದ ಅನುದಾನವನ್ನು CTS 8 ನಲ್ಲಿ ಖಜಾನೆಯಿಂದ ಸೆಳೆಯಲು ಆದೇಶ ನೀಡಿದೆ.

(ಡಾ. ಕೆ.ಜಿ ಜಗದೀಶ) ಭಾ.ಆ.ಸೇ
ಆಯುಕ್ತರು

ಇವರಿಗೆ:

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ಪ್ರಾಥಮಿಕ & ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ, ಬೆಂಗಳೂರು.
2. ಕಛೇರಿ ಪ್ರತಿ

ತಾಲ್ಲೂಕು ದುರಸ್ಥಿ ಸೂಚ್ಯಂಕದ ಪ್ರಕಾರ 2019-20ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕೊಠಡಿ ನಿರ್ಮಾಣಕ್ಕಾಗಿ ಜಿಲ್ಲಾವಾರ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ

ಸರ್ಕಾರಿ ಆದೇಶ ಸಂಖ್ಯೆ : ಇಪಿ 03 ಯೋಯೋಕ 2019 ಬೆಂಗಳೂರು ದಿನಾಂಕ; 23-04-2019

ಲೆಕ್ಕ ಶೀರ್ಷಿಕೆ: 4202-01-202-1-05-133

| ಕ್ರಮ ಸಂಖ್ಯೆ | ಜಿಲ್ಲೆಗಳು | ಕೊಠರಿಗಳ ಸಂಖ್ಯೆ | | ನಿಗದಿಪಡಿಸಿರುವ ಅನುದಾನ (ರೂ. ಲಕ್ಷಗಳಲ್ಲಿ) | ಈಗಾಗಲೇ ಬಿಡುಗಡೆಯಾದ 1ನೇ ತ್ರೈಮಾಸಿಕ ಅವಧಿಗೆ ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | 2 ಮತ್ತು 3ನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ | 4ನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ | ಷರಾ |
|---|---|---|---|---|---|---|---|---|
| | | ಪ್ರಾಥಮಿಕ | ಪ್ರೌಢ ಶಾಲೆ | | | | | |
| 1 | ಬಳ್ಳಾರಿ | 0 | 11 | 173.25 | 43.3125 | 86.625 | 43.3125 | |
| 2 | ಬೀದರ್ | 0 | 11 | 173.25 | 43.3125 | 86.625 | 43.3125 | |
| 3 | ಯಾದಗಿರಿ | 0 | 9 | 141.75 | 35.4375 | 70.875 | 35.4375 | |
| 4 | ಕಲಬುರ್ಗಿ | 7 | 19 | 373.45 | 93.3625 | 186.725 | 93.3625 | |
| 5 | ರಾಯಚೂರು | 0 | 14 | 220.50 | 55.125 | 110.25 | 55.125 | |
| 6 | ಕೊಪ್ಪಳ | 0 | 9 | 141.75 | 35.4375 | 70.875 | 35.4375 | |
| 7 | ಬೆಳಗಾವಿ | 1 | 2 | 42.10 | 10.5250 | 21.050 | 10.5250 | |
| | ಚಿಕ್ಕೋಡಿ ಶೈಕ್ಷಣಿಕ | 1 | 4 | 73.60 | 18.4000 | 36.800 | 18.4000 | |
| 8 | ವಿಜಯಪುರ | 0 | 12 | 189.00 | 47.250 | 94.50 | 47.250 | |
| 9 | ಬಾಗಲಕೋಟೆ | 0 | 5 | 78.75 | 19.6875 | 39.375 | 19.6875 | |
| 10 | ಧಾರವಾಡ | 1 | 2 | 42.10 | 10.5250 | 21.050 | 10.5250 | |
| 11 | ಗದಗ | 1 | 2 | 42.10 | 10.5250 | 21.050 | 10.5250 | |
| 12 | ಹಾವೇರಿ | 0 | 4 | 63.00 | 15.7500 | 31.50 | 15.7500 | |
| 13 | ಉತ್ತರ (ಕನ್ನಡ) | 1 | 1 | 26.35 | 6.5875 | 13.175 | 6.5875 | |
| | ಶಿರಸಿ ಶೈಕ್ಷಣಿಕ | 0 | 2 | 31.5 | 7.875 | 15.75 | 7.875 | |
| 14 | ರಾಮನಗರ | 2 | 3 | 68.45 | 17.1125 | 34.225 | 17.1125 | |
| 15 | ಬೆಂಗಳೂರು ಗ್ರಾಮಾಂತ | 0 | 1 | 15.75 | 3.9375 | 7.875 | 3.9375 | |
| 16 | ಬೆಂಗಳೂರು ದಕ್ಷಿಣ (ನ | 1 | 0 | 10.60 | 2.6500 | 5.30 | 2.6500 | |
| 17 | ಚಿತ್ರದುರ್ಗ | 1 | 7 | 120.85 | 30.2125 | 60.425 | 30.2125 | |
| 18 | ದಾವಣಗೆರೆ | 1 | 6 | 105.10 | 26.2750 | 52.550 | 26.2750 | |
| 19 | ಕೋಲಾರ | 3 | 1 | 47.55 | 11.8875 | 23.775 | 11.8875 | |
| 20 | ಚಿಕ್ಕಬಳ್ಳಾಪುರ | 1 | 4 | 73.60 | 18.4000 | 36.800 | 18.4000 | |
| 21 | ಶಿವಮೊಗ್ಗ | 0 | 2 | 31.50 | 7.8750 | 15.75 | 7.8750 | |
| 22 | ತುಮಕೂರು | 1 | 7 | 120.85 | 30.2125 | 60.425 | 30.2125 | |
| | ಮಧುಗಿರಿ ಶೈಕ್ಷಣಿಕ | 0 | 8 | 126.00 | 31.50 | 63.00 | 31.50 | |
| 23 | ಚಿಕ್ಕಮಗಳೂರು | 0 | 3 | 47.25 | 11.8125 | 23.625 | 11.8125 | |
| 24 | ಹಾಸನ | 2 | 3 | 68.45 | 17.1125 | 34.225 | 17.1125 | |
| 25 | ಮಂಡ್ಯ | 1 | 5 | 89.35 | 22.3375 | 44.675 | 22.3375 | |
| 26 | ಮೈಸೂರು | 1 | 8 | 136.60 | 34.1500 | 68.300 | 34.1500 | |
| 27 | ಚಾಮರಾಜನಗರ | 5 | 4 | 116.00 | 29.0000 | 58.00 | 29.0000 | |
| | ಒಟ್ಟು ರೂ | 31 | 169 | 2990.35 | 747.59 | 1495.175 | 747.59 | |

ಸಹ ನಿರ್ದೇಶಕರು (ಶಾಲಾ ಶಿಕ್ಷಣ)
ಆಯುಕ್ತರ ಕಛೇರಿ, ಸಾ.ಶಿ.ಇ
ಬೆಂಗಳೂರು